ಶೆಟ್ಟರು ಸಂಜಯನನ್ನು ನೋಡಿ 'ಆಗುವುದನ್ನು ಯಾರಿಂದ ತಡೆಯಲು ಸಾಧ್ಯ ನೋಡಿ' ಅನ್ನುತ್ತಾ ತಮ್ಮ ಆಧ್ಯಾತ್ಮಿಕ ಜ್ಞಾನ ತೋರಿಸಿದರು.

ಆನಂದಣ್ಣ ಸಂಜಯನ ಕಡೆಗೆ ತಿರುಗಿ 'ನಮಗೆ ಇನ್ನು ಮುಂದೆ ಇವರೇ ಕಾರಂತರು' ಅಂದರು. ಅವರ ಮಾತಿನ ಒಳಾರ್ಥ ಇವರು ಇನ್ನು ಮುಂದೆ ಕಾರಂತರ ಆಸ್ತಿಯ ವಾರಸುದಾರರು ಎನ್ನುವಂತಿತ್ತು.

ಅದಕ್ಕೆ ಶೆಟ್ಟರು 'ಇವರೆಲ್ಲಿ ಬರ್ತಾರೆ? ಇವರು ಅಮೆರಿಕದಲ್ಲಿ ಇರುವವರು, ಸೀತಾಪುರದಂತಹ ಹಳ್ಳಿಯಲ್ಲಿ ಏನ್ಮಾಡುತ್ತಾರೆ?' ಅಂದರು.

ಅದಕ್ಕೆ ಸಂಜಯ್ ಶೆಟ್ಟರಲ್ಲಿ 'ನೋಡಿ ಶೆಟ್ರೇ, ನನಗೆ ಅಮೆರಿಕದಲ್ಲಿ ಒಳ್ಳೆ ಕೆಲಸ ಮತ್ತು ಮನೆ ಇದೆ. ನಾನು ಇಲ್ಲಿಗೆ ಔಷಧಕ್ಕಾಗಿ ಬಂದವನು' ಅಂದ. ಮತ್ತೆ ಮಾತು ಮುಂದುವರಿಸಿ, 'ನಿನ್ನೆ ನೀವು ನನ್ನ ಹಿಂದೆ ಹುಡುಗನನ್ನು ಕಳುಹಿಸಿದ್ರಿ. ಹಾಗೇ ಕೋಲದಲ್ಲಿ ನನ್ನ ಬಗ್ಗೆ ಪ್ರಶ್ನೆ ಕೇಳಿದ್ರಿ. ಹಾಗಾಗಿ ನಾನು ನಿಮ್ಮಲ್ಲಿ ಬಂದು ನೇರವಾಗಿ ಮಾತನಾಡ್ತೇನೆ ಅಂತ ಇವತ್ತು ಬಂದೆ' ಎಂದ.

ಶೆಟ್ಟರಿಗೆ ಸ್ವಲ್ಪ ಮುಜುಗರವಾಯಿತು. 'ಅದು ಹಾಗೆ ಅಲ್ಲ ಕಾರಂತರೇ...' ಎಂದು ಶುರು ಮಾಡಿದರು.

ಆನಂದಣ್ಣ ಶೆಟ್ಟರ ಸಹಾಯಕ್ಕೆ ಬಂದು, 'ನೋಡಿ ಕಾರಂತರೇ, ಶೆಟ್ಟರು ಈ ಊರಿನ ಮುಖಂಡ. ಊರಿನ ಜವಾಬ್ದಾರಿ ಅವರ ಹೆಗಲ ಮೇಲಿದೆ. ಹಾಗಾಗಿ ನಿಮ್ಮ ಬಗ್ಗೆ ಅವರಿಗೆ ಕಾಳಜಿ–ಆತಂಕ ಇರುವುದು ಸಹಜ' ಅಂದರು.

ಸಂಜಯ್ ನೇರವಾಗಿ ವಿಷಯಕ್ಕೆ ಬಂದ. 'ನೋಡಿ ಶೆಟ್ರೇ, ನೀವು ಮತ್ತೆ ಆನಂದಣ್ಣ ನನ್ನ ಅಜ್ಜನ ಜಾಗದಲ್ಲಿ ಕೃಷಿ ಮಾಡಿಕೊಂಡಿರುವುದರ ಬಗ್ಗೆ ನನಗೆ ಗೊತ್ತು. ನೀವು ಈ ತರಹ ನನ್ನಲ್ಲಿ ಮಾತಾಡುವುದರ ಬದಲು ನನ್ನತ್ರ ನೇರವಾಗಿ ಕೇಳಬಹುದಿತ್ತು. ಹೇಳ್ತೇನೆ ಕೇಳಿ – ನನಗೆ ನನ್ನ ಅಜ್ಜನ ಆಸ್ತಿ ಏನೂ ಬೇಡ. ನಾನು ಆಸ್ತಿಗಾಗಿ ಬಂದವನಲ್ಲ. ನೀವು ಅದರಲ್ಲಿ ತೋಟ ಗದ್ದೆ ಮಾಡಿಕೊಳ್ಳುವುದಕ್ಕೆ ನನ್ನ ಆಕ್ಷೇಪಣೆ ಇಲ್ಲ. ನಾನು ಅಮೆರಿಕದ ಬದುಕು ಬಿಟ್ಟು ಇಲ್ಲಿ ನಿಲ್ಲಲ್ಲಿಕ್ಕೆ ಬಂದಿಲ್ಲ. ಇಲ್ಲಿ ಬದುಕದ ಮೇಲೆ ಈ ಜಾಗ ಹಿಡಿದುಕೊಂಡು ನಾನೇನು ಮಾಡ್ಲಿ...' ಅಂದ.

ಒಂದು ಕ್ಷಣ ಸಂಪೂರ್ಣ ಮೌನ ಆವರಿಸಿತು.

ಶೆಟ್ಟರಿಗೂ ಆನಂದಣ್ಣನಿಗೂ ಈ ಮಾತುಗಳು ಅಮೃತವನ್ನೇ ಕುಡಿದಷ್ಟು ಆನಂದ ಕೊಟ್ಟವು. ಆದರೂ ಇಬ್ಬರಿಗೂ ಸಂಜಯನ ಮಾತು ಸಿಡಿಲುಬಡಿದಂತೆ ಆಗಿದ್ದವು. ನೇರ ಹಾಗೂ ನಿಷ್ಠುರ. ಈ ಹುಡುಗನಿಂದ ಇದನ್ನು ನಿರೀಕ್ಷಿಸಿರಲಿಲ್ಲ. ಆನಂದಣ್ಣ ಮೌನ ಮುರಿದು, 'ಶೆಟ್ರೇ, ಇವರು ಕಾರಂತರ ಮೊಮ್ಮಗನೇ ಸರಿ. ಅವರದೇ ನೇರ ಮಾತು, ಅವರದೇ ಔದಾರ್ಯ... ಅಬ್ಬಬ್ಬಾ ನನಗೆ ದೊಡ್ಡ ಕಾರಂತರನ್ನೇ ನೋಡಿದ ಹಾಗೆ ಕಾಣುತ್ತದೆ ನೋಡಿ!' ಅಂದರು.

ಶೆಟ್ಟರು ತಲೆಯಾಡಿಸುತ್ತಾ 'ನಿಮ್ಮ ಅಜ್ಜ ಕೊಡುಗೈ ದಾನಿ, ಇಡೀ ಊರಿಗೆ ಕಾರಂತರೆಂದರೆ ಗೌರವ, ಭಯ. ಅವರು ನಿಮ್ಮ ತರವೇ ನೇರ ಮಾತಾಡುವವರು. ನಿಮ್ಮ ತರವೇ ಕ್ಷಣಾರ್ಧದಲ್ಲಿ ನಿರ್ಧಾರ ತೆಗೆದುಕೊಳ್ಳುವವರು' ಅಂದರು.

ಆನಂದಣ್ಣ ಸಂಜಯನಿಗೆ ಕೈಮುಗಿದು, 'ಕಾರಂತರೇ, ಹಾಗಾದರೆ ನಿಮ್ಮ ಜಾಗದಲ್ಲಿ ಕೃಷಿ ಮಾಡಿದ್ದಕ್ಕೆ ನಿಮಗೆ ನಮ್ಮ ಮೇಲೆ ಬೇಸರ ಇಲ್ಲ ಅಂತಾಯಿತು' ಅಂದರು.

ಅದಕ್ಕೆ ಸಂಜಯ್, 'ಆನಂದಣ್ಣ, ಶೆಟ್ರೇ, ನೀವು ನನಗೆ ಹಿರಿಯರು. ಈ ಊರಿಗೂ ಹಿರಿಯರು. ನೀವು ಕೃಷಿ ಮಾಡಿಕೊಂಡದ್ದಕ್ಕೆ ನನಗೆ ಯಾವ ಬೇಸರವೂ ಇಲ್ಲ. ನನಗೆ ಈ ಜಾಗ ಬೇಕಿಲ್ಲ. ಇದು ನಿಮ್ಮಲ್ಲೇ ಇರಲಿ' ಅಂದ.

ಸಂಜಯ್ ಮುಂದುವರಿಸಿ, 'ಅಂದಹಾಗೆ ಶೆಟ್ರೇ, ನೀವು ಈ ಊರಿನ ಮುಖಂಡ. ಈ ಊರಿನ ಒಳಿತು ನಿಮ್ಮ ಕೈಯಲ್ಲಿದೆ. ಈ ವಿಷಯದಲ್ಲಿ ನನ್ನದೊಂದು ಪ್ರಸ್ತಾವನೆ ಇದೆ' ಅಂದ.

ಶೆಟ್ಟರು ಮತ್ತು ಆನಂದಣ್ಣನಿಗೆ ಸಂತೋಷವೇ ಸಂತೋಷ. ಅಬ್ಬಬ್ಬಾ ಅನಿಸಿತು.

'ಹೇಳಿ ಕಾರಂತರೇ, ನಿಮ್ಮ ಮಾತು ದೊಡ್ಡ ಕಾರಂತರ ಮಾತು ಅಂತ ಕೇಳಿಸ್ಕೊಳ್ತೇವೆ' ಅಂದರು ಶೆಟ್ಟರು.

'ನೋಡಿ ಶೆಟ್ರೇ, ನಾನು ಶಾಸ್ತ್ರಿಗಳಲ್ಲಿಗೆ ಮದ್ದಿಗೆ ಬಂದದ್ದು ಸರಿ. ಆಯುರ್ವೇದದಲ್ಲಿ ಗುಣ ಆಗುತ್ತದೆ ಅಂತ ಬಂದೆ.'

ಆನಂದಣ್ಣ 'ನಮ್ಮ ಶಾಸ್ತ್ರಿಗಳು ಔಷಧ ಕೊಟ್ರೆ ಖಂಡಿತ ಸಂಪೂರ್ಣ ಗುಣವಾಗ್ತದೆ. ಅವರ ಕೈಗುಣ ಅಂತದ್ದು' ಅಂದರು.

'ಅದು ಸರಿ ಆನಂದಣ್ಣ, ಬಂದು ಒಂದು ವಾರದಲ್ಲೇ ಇದು ಗುಣ ಆಗಿದೆ. ಆದರೆ ಶಾಸ್ತ್ರಿಗಳು ನನಗೆ ಸ್ವಲ್ಪ ಸಮಯ ಈ ಊರಲ್ಲಿದ್ದು ನಂತರ ಹೋಗ್ಲಿಕ್ಕೆ ಹೇಳಿದ್ದಾರೆ. ಹಾಗಾಗಿ ಮುಂದಿನ ಎರಡು ತಿಂಗಳು ನಾನು ಇಲ್ಲೇ ಇರ್ಲಿಕ್ಕೆ ನಿರ್ಧಾರ ಮಾಡಿದ್ದೇನೆ' ಅಂದ.

'ಬಹಳ ಸಂತೋಷ ಕಾರಂತರೇ, ಇದು ನಿಮ್ಮ ಊರು, ನಮಗೂ ಸಂತೋಷ' ಅಂದರು ಆನಂದಣ್ಣ.

'ಅದು ಸರಿ. ಆದರೆ ನಾನು ಸುಮ್ಮನೆ ಕೂತುಕೊಳ್ಳುವವನಲ್ಲ. ಹಾಗಾಗಿ ಒಂದು ಹೊಸ ಪ್ಲಾನ್ ಹಾಕಿದ್ದೇನೆ' ಅಂದ.

ಶೆಟ್ರು ಮತ್ತು ಆನಂದಣ್ಣ ಗಣಪತಿ ಮಹಾಭಾರತದ ಕಥೆ ವ್ಯಾಸಮುನಿಗಳಿಂದ ಕೇಳಿದ ತರಹ ಸಂಪೂರ್ಣ ಏಕಾಗ್ರತೆಯಿಂದ ಕೇಳತೊಡಗಿದರು.

'ನೋಡಿ, ಅಮೆರಿಕ ಒಂದು ಅಭಿವೃದ್ಧಿ ಹೊಂದಿದ ದೇಶ. ಅಲ್ಲಿ ಏನಿಲ್ಲ ಅಂದರೆ ಎಲ್ಲವೂ ಇದೆ. ಆದರೆ ನಮ್ಮ ದೇಶ ನೋಡಿ. ಊರುಗಳಿಗೆ ಸರಿಯಾದ ರಸ್ತೆ ಇಲ್ಲ. ಸರಿಯಾದ ಶಾಲೆ ಇಲ್ಲ, ಕಾಲೇಜು ಇಲ್ಲ. ಹೀಗೇ ಎಷ್ಟು ದಿನ ನಡೆಯಬಹುದು ಹೇಳಿ? ನಮ್ಮ ಜನರು ಆ ಅಮೆರಿಕನ್ನರಿಗಿಂತ ತುಂಬಾ ಬುದ್ಧಿವಂತರು. ನನ್ನಪ್ಪನನ್ನೇ ನೋಡಿ, ಅಮೆರಿಕದಲ್ಲಿ ಬಹಳ ಯಶಸ್ಸು ಗಳಿಸಿದರು. ನಮ್ಮಲ್ಲಿ ಅವಕಾಶಗಳು ತುಂಬಾ ಕಡಿಮೆಯಿವೆ, ಹಾಗೇ ಏನಾದರೂ ಮಾಡ್ಲಿಕ್ಕೆ ಬಂಡವಾಳ ಇಲ್ಲ. ಇದನ್ನು ಸರಿಮಾಡಿದರೆ ನಾವು ತುಂಬಾ ಅಭಿವೃದ್ಧಿ ಹೊಂದಬಹುದು' ಅಂದ.

'ಅಂದ್ರೆ ಕಾರಂತರೇ, ನೀವು ಏನು ಹೇಳ್ತಿರಿ?' ಕೇಳಿದರು ಶೆಟ್ರು.

'ಸೀತಾಪುರವನ್ನು ಅಭಿವೃದ್ಧಿ ಮಾಡಬೇಕು. ಸೀತಾಪುರಕ್ಕೊಂದು ಒಳ್ಳೆ ರಸ್ತೆ, ಶಾಲೆ, ಕಾಲೇಜು, ಆಸ್ಪತ್ರೆ, ಕಾರ್ಖಾನೆ, ಫ್ಯಾಕ್ಟರಿಗಳು, ಪ್ರತೀ ಮನೆಯಲ್ಲಿ ಕಾರು, ಬೈಕು, ಕೈತುಂಬಾ ಹಣ... ಇತ್ಯಾದಿ' ಅಂದ ಸಂಜಯ್.

'ಅದೆಲ್ಲ ಹೇಗೆ ಆಗ್ತದೆ ಕಾರಂತರೇ' ಶೆಟ್ರು ಕೇಳಿದರು.

'ಶೆಟ್ರೇ, ನೀವೆಲ್ಲ ನಾನು ಹೇಳಿದ ಹಾಗೆ ಎರಡು ತಿಂಗಳು ಕೇಳಿದ್ರೆ ಸೀತಾಪುರ ಬಹಳ ಅಭಿವೃದ್ಧಿ ಆಗುತ್ತದೆ, ನಾನು ಮಾಡಿ ತೋರಿಸ್ತೇನೆ' ಅಂದ.

ಆನಂದಣ್ಣ ಮತ್ತು ಶೆಟ್ರು ಪರಸ್ಪರ ಮುಖ ನೋಡಿದರು. ಈ ಹುಡುಗ ಒಂದರ ಮೇಲೊಂದು ಒಳ್ಳೆ ವಿಷಯ ಹೇಳುತ್ತಿದ್ದಾನಲ್ಲ ಎಂದು ಅವರಿಗೆ ಅನಿಸಿತು. ಶೆಟ್ರು ಹೇಳಿದರು, 'ನೋಡಿ ಕಾರಂತರೇ, ನಿಮ್ಮಲ್ಲಿ ನಮಗೆ ಸಂಪೂರ್ಣ ನಂಬಿಕೆ ಇದೆ. ಆದರೆ ನೀವು ಹೇಳುವುದು ನಂಬಲಿಕ್ಕೇ ಆಗುವುದಿಲ್ಲ. ನಾವು ಬಿಡಿ, ಯಾರಿಂದಲೂ ನಂಬಲಿಕ್ಕೆ ಆಗ್ಲಿಕ್ಕಿಲ್ಲ. ಎರಡು ತಿಂಗಳಲ್ಲಿ ಏನು ಮಾಡಬಹುದು ಹೇಳಿ?'

ಸಂಜಯ್ 'ನೋಡಿ ಶೆಟ್ರೇ, ನಾನು ಸೋಶಿಯಲ್ ಮೀಡಿಯಾದ ಸೆಲೆಬ್ರಿಟಿ. ನೀವು 'ಸಂಜಯ್ ಕಾರಂತ್' ಅಂತ ಇಂಟರ್ನೆಟ್‌ನಲ್ಲಿ ಸರ್ಚ್ ಮಾಡಿದರೆ ನನ್ನ ಬಗ್ಗೆ ಗೊತ್ತಾಗುತ್ತದೆ. ಲಕ್ಷಾಂತರ ಜನ ನನ್ನನ್ನು ಸೋಶಿಯಲ್ ಮೀಡಿಯಾದಲ್ಲಿ ಫಾಲೋ ಮಾಡ್ತಾರೆ' ಅಂದ.

ಶೆಟ್ರಿಗೆ ತಲೆಬುಡ ಅರ್ಥ ಆಗ್ಲಿಲ್ಲ. ಈ ಹುಡುಗ ಏನೋ ದೊಡ್ಡ ಕೆಲಸ ಮಾಡ್ತಾನೆ ಅಂತ ಕಂಡಿತು.

ಆನಂದಣ್ಣ ಇಡೀ ಸೀತಾಪುರದಲ್ಲೇ ಹೆಚ್ಚಿನ ಹೊರ ಪ್ರಪಂಚದ ಜ್ಞಾನ ಇರುವವರು. ಅವರಿಗೂ ಇದು ಪೂರ್ತಿ ಅರ್ಥ ಆಗಲಿಲ್ಲ. ಆದರೂ ಶೆಟ್ಟರಿಗೆ ಸಲಹೆ ಹೇಳುವುದು ಅವರ ಕರ್ತವ್ಯ ಅಂತ ಎಣಿಸಿಕೊಂಡು ಹೇಳಿದರು.

'ಶೆಟ್ರೇ, ಈ ಸೆಲ್ ಫೋನುಗಳಲ್ಲಿ ಇಂಟರ್ನೆಟ್ ಅಂತ ಇದೆ. ಅದರಲ್ಲಿ ನಮ್ಮ ಕಾರಂತರು ರಾಜಕುಮಾರ್ ತರ ಬಹಳ ಪ್ರಸಿದ್ಧ' ಎನ್ನುತ್ತಾ ಸಂಜಯ್ ಕಡೆ ಮೆಚ್ಚುಗೆಯ ನೋಟ ನೋಡಿದರು.

ಶೆಟ್ಟರಿಗೆ ಅರ್ಥ ಆಗ್ಲಿಲ್ಲ. 'ಕಾರಂತರೇ, ನೀವು ಪ್ರಸಿದ್ಧ ಅಂತ ಗೊತ್ತಾಗಿ ಸಂತೋಷ ಆಯಿತು. ಆದ್ರೆ ನೀವು ಮಾಡುವುದು ಏನು ಅಂತ ಗೊತ್ತಾಗ್ಲಿಲ್ಲ. ರಾಜಕುಮಾರ್ ಸಿನಿಮಾ ಮಾಡುತ್ತಿದ್ರು. ನೀವೇನು ಮಾಡ್ತೀರಿ?' ಅಂದರು.

ಸಂಜಯ್ 'ಶೆಟ್ರೇ, ನನ್ನ ಕೆಲಸ ಇದೇ, ನಾನು ಸೀತಾಪುರದ ಹಾಗಿರುವ ಜಾಗಕ್ಕೆ ಹೋಗಿ ಅಲ್ಲಿಯ ಜನರೊಂದಿಗೆ ಬದುಕುತ್ತೇನೆ. ನಾನು ಹೋಗುವ ಜಾಗದಲ್ಲಿ ಮಾಡುವ ಕೆಲಸ ಒಂದೇ – ಅದು ಇಂಟರ್ನೆಟ್ ಅನ್ನು ಜನರಿಗೆ ಪರಿಚಯಿಸುವುದು ಮತ್ತು ಇಂಟರ್ನೆಟ್ ಉಪಯೋಗಿಸಿ ಸೋಶಿಯಲ್ ಮೀಡಿಯಾ ಮುಖಾಂತರ ಆ ಜಾಗದ ವೈಶಿಷ್ಟ್ಯವನ್ನು ಜಗತ್ತಿಗೆ ಪರಿಚಯಿಸುವುದು. ಇದರಿಂದ ಹೊರಜಗತ್ತಿಗೆ ಒಂದು ಹೊಸ ಲೋಕವೇ ಪರಿಚಯ ಆದಂತಾಗುತ್ತದೆ. ಅವರು ಈ ಹೊಸಜಗತ್ತಿನ